ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ನಮ್ಮ ಭಾರತ ಇನ್ನೊಂದು ಭಾರತ

ಬಾಂಗ್ಲಾದೇಶ ಪಾಕಿಸ್ತಾನದಿಂದ ಭಿನ್ನವಾಗಿ ನಿಂತು ಬೇರೊಂದು ದೇಶವಾಗಲು ಭಾಷೆಯೇ ಮೂಲ ಕಾರಣ. ಪಾಕಿಸ್ತಾನ ಉರ್ದುವನ್ನು ತನ್ನ ರಾಷ್ಟ್ರಭಾಷೆಯನ್ನಾಗಿ ಘೋಷಿಸದೇ, ಅಲ್ಲಿ ಬಹುಸಂಖ್ಯೆಯಲ್ಲಿದ್ದ ಪಂಜಾಬಿ ಮತ್ತು ಸಿಂಧಿ ಭಾಷೆಗಳನ್ನೂ ಅಪ್ಪಿದ್ದರೆ ಉರ್ದು ಭಾಷೆಯ ಸ್ಥಾನ ಇಂದಿಗೆ ಭಿನ್ನವಾಗಿರುತ್ತಿತ್ತೇನೋ?

ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣವು ಮುಸ್ಲಿಮರ ಪ್ರಶ್ನೆಯನ್ನು ಹೇಗೆ ನಿಭಾಯಿಸಿತು ಎಂಬುದು ಕುತೂಹಲಕಾರಿಯಾದ ಮತ್ತು ಅಷ್ಟೇ ವಿವಾದಾಸ್ಪದವೂ ಆಗಿರುವ ಚರ್ಚೆ. ದೇಶ ಮತಾಧಾರಿತವಾಗಿ ಒಡೆಯಿತು. ತಮ್ಮ ಮತ ಅಥವಾ ಧರ್ಮ ಮುಖ್ಯ ಅನ್ನಿಸಿರಬಹುದಾದ ಅಥವಾ ತಮ್ಮ ಮತಾನುಸಾರ ಶಾಂತಿಯಿಂದ ಬದುಕು ನಡೆಸಬಹುದು ಎಂದುಕೊಂಡ ಮುಸಲ್ಮಾನರು 'ಭಾರತದಿಂದ' ಹೊಸತಾಗಿ ಸೃಷ್ಟಿಯಾಗಿದ್ದ 'ಪಾಕಿಸ್ತಾನ'ಕ್ಕೆ ಹೋದರು. ಪಾಕಿಸ್ತಾನವಾಗುವುದಕ್ಕೂ ಮೊದಲಿಂದಲೇ ಅಲ್ಲಿದ್ದ ಬಹುಸಂಖ್ಯೆಯ ಮುಸ್ಲಿಮರು ಅಲ್ಲಿಯೇ ನೆಲೆಸಿದರು.

ತಮ್ಮ ಧರ್ಮವನ್ನು ಪಾಲಿಸುತ್ತಲೇ ಭಾರತದಲ್ಲಿ ಅಲ್ಪಸಂಖ್ಯಾತರಾಗಿ ಉಳಿದವರನ್ನು ಈ ದೇಶ ಹೇಗೆ ನಿಭಾಯಿಸಿತು? ಇದು ಸರಳ ಉತ್ತರಗಳಿಲ್ಲದ ಕಷ್ಟದ ಪ್ರಶ್ನೆ. ಸ್ವಾತಂತ್ರ್ಯ ಸಿಕ್ಕ ಎಪ್ಪತ್ತೈದು ವರ್ಷಗಳ ನಂತರ, ಇಪ್ಪತ್ತೊಂದನೇ ಶತಮಾನದಲ್ಲಿ ನಿಂತು ಹಿಂದಿರುಗಿ ನೋಡಿದರೆ ನಮ್ಮ ನಾಯಕರು 'ಮುಸ್ಲಿಮರ ಪ್ರಶ್ನೆ'ಯನ್ನು ಹೇಗೆಲ್ಲಾ ನಿಭಾಯಿಸಿದರು ಎಂಬುದರ ವಿಹಂಗಮ ಚಿತ್ರಣವೊಂದು ದೊರೆಯುತ್ತದೆ. ಇದರಲ್ಲಿ ಭವಿಷ್ಯದಲ್ಲಿ ಈ ನಿಭಾವಣೆ ಹೇಗಿರಬೇಕು/ಹೇಗಿರಬಾರದು ಎಂಬುದಕ್ಕೆ ಕೆಲವು ಒಳನೋಟಗಳು ಸಿಗುತ್ತವೆಯಾದರೂ ಸದ್ಯದ ರಾಜಕೀಯ ವಾತಾವರಣದಲ್ಲಿ ಅದು ಅರಣ್ಯರೋದನವಷ್ಟೇ ಆಗಿ ಉಳಿಯಬಹುದು.

ಪ್ರತಿನವ್ ಅನಿಲ್ ಅವರ 'ಅನದರ್ ಇಂಡಿಯಾ' ಪುಸ್ತಕ ಮುಸ್ಲಿಮರ ಪ್ರಶ್ನೆಯನ್ನು ನಿಕಷಕ್ಕೆ ಒಡ್ಡಿದೆ. 1947ರಿಂದ 1977ರ ಮೂವತ್ತು ವರ್ಷಗಳ ಕಾಲಘಟ್ಟವನ್ನು ಪರಿಗಣಿಸಿ ನಡೆಸಿರುವ ಅನಿಲ್ ಅವರ ವಿಶ್ಲೇಷಣೆ, ಮುಸ್ಲಿಂ ಸಮುದಾಯದ ಪ್ರಾತಿನಿಧ್ಯ ವಹಿಸಿದ್ದ ಮೂರು ಭಿನ್ನ ರೀತಿಯ ಹಿನ್ನೆಲೆಯ ಜನರನ್ನು ಗುರುತಿಸುತ್ತದೆ. ಧರ್ಮ ಮತ್ತು ಅದರ ಪ್ರಕ್ರಿಯೆಗಳಿಗೆ ವಿಧೇಯರಾದ ಸಂಪ್ರದಾಯವಾದಿಗಳು ತಮ್ಮ ಅಸ್ಮಿತೆಯನ್ನು ಕಾಪಾಡಿಕೊಳ್ಳಲು ಹೆಣಗುತ್ತಾ ಪವಿತ್ರ ಗ್ರಂಥ, ಧಾರ್ಮಿಕ ವಿಧಿಗಳು ಮತ್ತು ತಮ್ಮ ಗುರುತು, ವೈಶಿಷ್ಟ್ಯವನ್ನು ಉಳಿಸಿಕೊಳ್ಳುವ ಜನರದ್ದು ಒಂದು ವರ್ಗ (ಮಜ್ಲಿಸ್, ಮುಸ್ಲಿಂ ಲೀಗ್ ಇತ್ಯಾದಿ). ಈ ವರ್ಗದವರು ವಿಭಜನೆಯ ಕಾಲದಲ್ಲಿ ಪಾಕಿಸ್ತಾನಕ್ಕೆ ವಲಸೆ